KARNATAKA LOKAYUKTA

No.Uplok-2/DE/152/2017/ARE-15

M.S. Building,
Dr. B.R. Ambedkar Veedhi,
Bengaluru - 560 001.
Date: 27/10/2023.

-: ENQUIRY REPORT :-

Sub:- Departmental Inquiry against Sri. M.K. Bhaskar, Executive Engineer, Panchayathraj Engineering Division, Mysore (then Executive Engineer, B.R.L.B.C. Division-4, Bhadravathi, Shivamogga District) – regarding.

Ref:- 1. Government Order No. ಜಸಂಇ/150/ಸೆಇವೀ /2016, ಬೆಂಗಳೂರು, ದಿನಾಂಕ: 14/12/2016.

2. Nomination Order No. UPLOK-2/DE/152/2017, Bengaluru dated 31/01/2017 of the then Hon'ble Upalokayukta.

****

The Departmental Enquiry is initiated against Delinquent Government Official Sri. M.K. Bhaskar, Executive Engineer, Panchayathraj Engineering Division, Mysore (then Executive Engineer, B.R.L.B.C. Division-4, Bhadravathi, Shivamogga District) (*hereinafter referred as **DGO** in short).*

2. In pursuance of the Government Order cited at reference No.1 above, the then Hon'ble Upalokayukta vide order dated: 31/01/2017 cited at reference No.2 above, has nominated the

Additional Registrar of Enquiries-4 to frame Articles of Charge and to conduct the inquiry against the aforesaid DGO.

3. Hon'ble Upalokayukta-2 on perusal of prima facie material submitted Report Dated: 26/08/2016 under Section 12(3) of Karnataka Lokayukta Act, 1984, to initiate disciplinary proceedings against DGO.

4. The Additional Registrar of Enquiries-4 had issued the Articles of charge, Statement of Imputations of Misconduct, List of Witnesses proposed to be examined in support of the charge and List of Documents proposed to be relied upon in support of the charge.

5. The Articles of Charge issued by ARE-4 to the DGO is as under;

ANNEXURE-I
CHARGE

"ಆಪಾದಿತ ಸರ್ಕಾರಿ ನೌಕರರಾದ/ಶ್ರೀ ಎಂ.ಕೆ. ಭಾಸ್ಕರ್, ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು (ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ, ಶಿವಮೊಗ್ಗ ಜಿಲ್ಲೆ) ಆದ ನೀವು ಭದ್ರಾವತಿ ನಂ.4 ಬಿ.ಆರ್.ಎಲ್.ಬಿ.ಸಿ. ವಿಭಾಗದಲ್ಲಿ ಕಾರ್ಯಪಾಲಕ ಇಂಜಿನಿಯರ್‌ರಾಗಿ ಕೆಲಸ ಮಾಡುತ್ತಿದ್ದಾಗ ಹುಚ್ಚರಾಯನ ಕೆರೆಯ ಬಂದ್‌ನಿಂದ ಯಾತ್ರಿ ನಿವಾಸದವರೆಗೆ ಹುಚ್ಚರಾಯನ ಕೆರೆಯನ್ನು ಸೌಂದರ್ಯಗೊಳಿಸುವ ಸಲುವಾಗಿ ಸಂಯುಕ್ತ ಕಾಂಪೌಂಡ್ ಗೋಡೆಯನ್ನು ಕಟ್ಟುವ ಕಾಮಗಾರಿಯನ್ನು ಈ-ಟೆಂಡರ್ ಮೂಲಕ

ಕರೆದಿದ್ದು, ಅದರಲ್ಲಿ 4 ಜನ ಗುತ್ತಿಗೆದಾರರು ಭಾಗವಹಿಸಿ 2 ಗುತ್ತಿಗೆದಾರರ ಟೆಂಡರ್ ತಿರಸ್ಕೃತವಾಗಿದ್ದು, ಉಳಿದ ಇಬ್ಬರು ಗುತ್ತಿಗೆದಾರರಾದ ಶ್ರೀ ರಾಜಕಿಶೋರ್ ರೆಡ್ಡಿ ಮತ್ತು ಶ್ರೀ ರಾಜು ಬೆಲಕುರಿ ಇವರ ತಾಂತ್ರಿಕ ಬಿಡ್ ಅಂಗೀಕಾರವಾಗಿದೆ. ಸದರಿ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್ ಅನ್ವಯ ಶ್ರೀ ರಾಜು ಬೆಲುಕರಿ, ಗುತ್ತಿಗೆದಾರರು ಕಡಿಮೆ ದರವನ್ನು ನಮೂದಿಸಿದ್ದರಿಂದ, ಅವರ ಆರ್ಥಿಕ ಬಿಡ್ ಅನುಮೋದನೆಗಾಗಿ ದಿನಾಂಕ: 02/03/2012ರಂದು ಕರಾರು ಒಪ್ಪಂದ ಮಾಡಿಕೊಂಡು ಸದರಿ ಕಾಮಗಾರಿಯ ಕೆಲಸವನ್ನು ನಿರ್ವಹಿಸಿದ್ದಾರೆ. ಆದರೆ, ನೀವು/ಆಪಾದಿತ ಸರ್ಕಾರಿ ನೌಕರರು ಈ ಕಾಮಗಾರಿಗಳನ್ನು ಟೆಂಡರ್ ಮೂಲಕ ನೀಡುವ ಸಂದರ್ಭದಲ್ಲಿ ಗುತ್ತಿಗೆದಾರರು ಸರಿಯಾದ ಗುತ್ತಿಗೆದಾರಿಕೆ ಪ್ರಮಾಣ ಪತ್ರವನ್ನು ಹೊಂದಿದ್ದಾರೆಯೇ ಅಥವಾ ಇಲ್ಲವೇ ಹಾಗೂ ಆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸರಿಯಾದ ರೀತಿ ಪರಿಶೀಲನೆ ಮಾಡಬೇಕಿತ್ತು. ಆದರೆ, ಈ ರೀತಿ ಶ್ರೀ ರಾಜು ಬೆಲುಕರಿರವರು ಪ್ರಥಮ ದರ್ಜೆ ಗುತ್ತಿಗೆದಾರರಾಗಿರುವ ಪ್ರಮಾಣ ಪತ್ರವನ್ನು ಸಮಬಂಧಪಟ್ಟ ಇಲಾಖೆಯಿಂದ ಪಡೆಯದಿದ್ದರೂ ಸಹಾ ಕಾಮಗಾರಿ ನಿರ್ವಹಿಸಲು ಟೆಂಡರ್ ನೀಡಿ ಕರ್ತವ್ಯಲೋಪವೆಸಗಿರುತ್ತೀರಿ. ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದವರ್ತನೆ) ನಿಯಮಾವಳಿ 1966ರ 3(i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ."

6. In pursuance thereof, the DGO appeared before this Inquiry Authority on 04/08/2017 and his First Oral Statement was recorded on the same day and he pleaded not guilty to the charge.

7. As per order of Hon'ble Uplok-1&2/DE/Transfers/2018 of Registrar, Karnataka Lokayukta, Bengaluru, dated: 02/11/2018 this Enquiry file was transferred from ARE-4 to this Section i.e., ARE-15.

8. On 11/12/2017, DGO filed his written statement by denying the entire charge framed against him. The allegation that without verifying the contract and work done certificate of Sri. Raju Chilukuri hc had allowed to execute compound wall of Huchcharayana Kere and he had failed to discharge official functions diligently and properly while entrusting the said work. As such, the complainant without ascertaining the true set of facts, has filed false complaint. He has not committed any act of dereliction of duty or misconduct and therefore prays to exonerate him.

9. In order to prove the charge, the Disciplinary Authority has examined one witness as PW-1 and got marked five documents a as per Ex.P-1 to Ex.P-5.

10. Thereafter, the Second Oral Statement of DGO/Sri. M.K. Bhaskar was recorded on 31/10/2022. Since, he intended to adduce evidence, matter was posted for defence evidence. DGO

got examined himself as DW-1 and got marked six documents as per Ex.D-1 to D-6.

11. Heard the arguments of both sides. I have also perused the written arguments submitted by the DGO and other material on record.

12. In the aforesaid facts and circumstances, the points that arise for consideration are as follows :

(1) Whether the Disciplinary Authority proves that the DGO/Sri. M.K. Bhaskar working as Executive Engineer in Panchayath Raj Engineering Division, BRLBC, Bhadravathi, Shivamogga District has entrusted the work without verifying the contract and work done certificate of Sri. Raju Chilukuri he had allowed to execute construction work of compound wall of Huchcharayana Kere and he had failed to discharge official functions diligently and properly and thereby committed misconduct or dereliction of duty and acted unbecoming of Government Servants and not maintained absolute integrity thereby violating R.3(1)(i) to (iii) of K.C.S. (Conduct) Rules, 1966?

(2) What Finding ?

13. My findings to the above points are :

1. In the **Negative**,
2. As per Finding for the following;

-: R E A S O N S :-

14. **Point No.1**:- The main allegations against the DGO are that when he was working as Executive Engineer, Bhadravathi No.4 BRLBC, a Tender was called for beautification of Huchcharaya Tank and construction of joint compound wall. He has received certificates from contractor without verifying the properly, who was not eligible for awarding contract.

15. In order to prove the case of the Disciplinary Authority, it has examined the complainant as PW-1. In his evidence he has stated as "ಶಿಕಾರಿಪುರದ ಹುಚ್ಚುರಾಯನ ಕೆರೆ ಬಂಡ್‌ನಿಂದ ಯಾತ್ರಿನಿವಾಸದ್ ವರೆಗೆ ಕಾಂಪೌಂಡ್ ಗೋಡೆ ಕಟ್ಟುವ ಕಾಮಗಾರಿಗೆ ಸಂಬಂಧಪಟ್ಟಂತೆ ನಾನು ಆಸನೌ ರವರ ವಿರುದ್ಧ ದೂರು ಸಲ್ಲಿಸಿರುತ್ತೇನೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ನಕಲಿ ಕಾಮಗಾರಿ ದೃಢೀಕರಣ ಪತ್ರವನ್ನು ಸಲ್ಲಿಸಿ ಕಾಮಗಾರಿಯನ್ನು ಪಡೆಯಲಾಗಿದೆ ಎಂದು ನಾನು ದೂರಿನಲ್ಲಿ ತಿಳಿಸಿರುತ್ತೇನೆ. ರಾಜು ಚಿಲ್‌ಕುರಿ ಎಂಬ ವ್ಯಕ್ತಿಯು ಸದರಿ ಕಾಮಗಾರಿಯ ಗುತ್ತಿಗೆದಾರನಾಗಿದ್ದ. ಕಾಂಪೌಂಡ್ ಗೋಡೆ ಕಾಮಗಾರಿ ಗುತ್ತಿಗೆ ಪಡೆಯಲು ಆತ ತಾಂತ್ರಿಕವಾಗಿ ಅರ್ಹರಾಗಿಲಿಲ್ಲ. ಅದೇ ರೀತಿ ಕಾಮಗಾರಿ ಹಿಂದೆ ಮಾಡಿರುತ್ತಾರೆಂಬ ದೃಢೀಕರಣ ಪತ್ರವನ್ನು

ಕಾರ್ಯಪಾಲಕ ಅಭಿಯಂತರವರಿಂದ ಪಡೆಯಬೇಕಾಗಿತ್ತು. ಆದರೆ, ನಕಲಿ ಕಾಮಗಾರಿ ದೃಢೀಕರಣ ಪತ್ರ () ಸಲ್ಲಿಸಿರುವುದನ್ನು ಆಸನೌರವರು ಪರಿಶೀಲನೆ ಮಾಡದೇ ಕಾಮಗಾರಿಯನ್ನು ಗುತ್ತಿಗೆದಾರರಿಗೆ ಕೊಟ್ಟಿದ್ದರು. ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ನಾನು ರೋಡಲ್‌ಬಂಡ ವಿಭಾಗ ಕಛೇರಿ ಉತ್ತರ ಕರ್ನಾಟಕ ದಿಂದ ದಾಖಲೆಗಳನ್ನು ಪಡೆದುಕೊಂಡು ದೂರು ಸಲ್ಲಿಸಿದ್ದೇನೆ. ಆ ಹೆಸರಿನ ವಿಭಾಗ ಇರುವುದಿಲ್ಲವೆಂದು ದಾಖಲೆಗಳನ್ನು ಕೊಟ್ಟಿದ್ದರು.

ದಿನಾಂಕ: 11/03/2014ರಂದು ನಿಶಾನೆ ಪಿ–3 ಪ್ರಮಾರಣ ಪತ್ರವನ್ನು ಭದ್ರಾವತಿಯಲ್ಲಿ ಮಾಡಿಸಿದ್ದೆ. ನಾನು ದೂರು ಸಲ್ಲಿಸಿರುವಾಗ ಪ್ರಥಮ ದರ್ಜೆ ಗುತ್ತಿಗೆದಾರನಾಗಿದ್ದೆ. ನಾನು ವ್ಯವಸಾಯವನ್ನು ಸಹಾ ಮಾಡುತ್ತೇನೆ. ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿಕೊಂಡಿರುತ್ತೇನೆ. ನಾನು ಲೋಕಾಯುಕ್ತ ಸಂಸ್ಥೆಯಲ್ಲಿ ಈ ದೂರು ಅಲ್ಲದೆ ಇನ್ನೂ 3 – 4 ದೂರುಗಳನ್ನು ಸಲ್ಲಿಸಿರುತ್ತೇನೆ. ಆಸನೌಕರವರ ವಿರುದ್ಧ ಎರಡು ದೂರುಗಳನ್ನು ಸಲ್ಲಿಸಿರುತ್ತೇನೆ. 2 ದೂರುಗಳನ್ನು ನಕಲಿ ಕಾಮಗಾರಿ ದೃಢೀಕರಣ ಪತ್ರಿಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತೇನೆ."

15. When PW-1 was cross-examined by Defence Assistant of DGO, he has stated as "ಪ್ರಥಮ ದರ್ಜೆ ಗುತ್ತಿಗೆದಾರರ ಪರವಾನಿಗೆಯನ್ನು ಮುಖ್ಯ ಅಭಿಯಂತರವರು ನೀಡುತ್ತಾರೆ. ಆಸನೌ ರವರಿಗೆ ಆ ಪರವಾನಿಗೆ ನೀಡಲು ಅಧಿಕಾರ ಇರುವುದಿಲ್ಲ. ಗುತ್ತಿಗೆ ಕೆಲಸ ನೀಡಲು ಅಧಿಕಾರ ಇರುತ್ತದೆ ಎಂದು ಸಾಕ್ಷಿದಾರರು ಮುಂದುವರೆದು ನುಡಿದಿರುತ್ತಾರೆ. ನಕಲಿ ಕಾಮಗಾರಿ ದೃಢೀಕರಣ ಪತ್ರ ನೀಡಿರುತ್ತಾರೆಂದು ನಾನು ಗುತ್ತಿಗೆದಾರರ ವಿರುದ್ಧ ಅಥವಾ ಆಸನೌ ರವರ ವಿರುದ್ಧ ಪೊಲಿಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರಲಿಲ್ಲ. ಮೇಲಾಧಿಕಾರಿಗಳಿಗೆ ಕೊಟ್ಟ ದೂರು ಅರ್ಜಿಗಳಲ್ಲಿ ಆಸನೌ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡುವಂತೆ ಹೇಳಿರುತ್ತೇನೆ. ನಕಲಿ ಕಾಮಗಾರಿ ದೃಢೀಕರಣ ಪತ್ರ ಕೊಡಲಾಗಿದೆ ಎಂಬ ವಿಚಾರ ಗೊತ್ತಾದ ಕೂಡಲೇ ಆಸನೌ

ರವರು ಹಿರಿಯ ಅಧಿಕಾರಿಗೆ ಪತ್ರವನ್ನು ಬರೆದು ಗುತ್ತಿಗೆದಾರರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲು ಮಾಡುವಂತೆ ಪತ್ರವನ್ನು ಬರೆದಿದ್ದರು ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ಗುತ್ತಿಗೆದಾರರ ಪರವಾನಿಗೆ ರದ್ದುಪಡಿಸಲು ಪತ್ರವನ್ನು ಆಸನ್ನೌ ರವರು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ." Further he has stated in his cross-examination that "ಚಿದಾನಂದ ರವರ ಹೇಳಿಕೆಯ ಪ್ರಕಾರ ಹಾಗೂ ಅವರು ಒದಗಿಸಿದ ದಾಖಲೆಗಳ ಆಧಾರದ ಮೇಲೆ ನಾನು ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ."

16. When the evidence of PW-1 is closely scrutinized it shows that he has not voluntarily filed this complaint by collecting materials against the DGO. He has filed the complaint on the instructions of one Sri. Chidananda and on the basis of documents supplied by him.

17. As stated above, it is the main allegation of the complainant that the contractor by name Sri. Raju Chilakuri has submitted a **"false work done certificate"** to the DGO and DGO has accepted it without verifying and thereby he has committed dereliction of duty. On behalf of the Disciplinary Authority, Ex.P-5 has been produced and the said Ex.P-5 contains page 17 to 30. Work done certificate dated: 04/11/2011 is finding place in the said Ex.P-5. In the said work done certificate, it has been

certified that Sri. Raju Chilakuri has done the work of construction of internal C.C. roads and drains at Jalahalli Camp Section of Deodurga Taluk during the year 2011-12. Further it is certificated that the total cost of Rs.65,86,800/- and the work has been completed within stipulated period and satisfactory. Now the complainant says that this is the fake certificate. It is pertinent to note that one Sri. Chidananda, Kanakatte, Channagiri Road, Bhadravathi has made a complaint to Executive Engineer, No.4, BRLBC Division, KNNL, Bhadravathi to take action since the contractor has given fake work done certificate .

18. The defence of the DGO is as follows;

"ಗುತ್ತಿಗೆದಾರರಿಗೆ ನಿಯಮಗಳಿಗನುಸಾರವಾಗಿ ಪರವಾನಗಿ ನೀಡುವ ಮತ್ತು ಪರವಾನಿಗೆಯನ್ನು ರದ್ದುಪಡಿಸುವ ಅಧಿಕಾರ ಕೇವಲ ಸಂಬಂಧಪಟ್ಟ ಮುಖ್ಯ ಇಂಜಿನಿಯರ್ ರವರಿಗೆ ಮಾತ್ರ ಇದ್ದು, ಪ್ರಸ್ತುತ ಕಾಮಗಾರಿಯಲ್ಲಿ ಇ-ಟೆಂಡರ್‌ನಲ್ಲಿ ಕಾರ್ಯನಿರ್ವಹಿಸಿದ ಗುತ್ತಿಗೆದಾರರಾದ ಶ್ರೀ ರಾಜು ಚಿಲಕುರಿ ಇವರ ತಾಂತ್ರಿಕ ಬಿಡ್ ಅನುಮೋದನೆಗಾಗಿ ಸಂಬಂಧಪಟ್ಟ ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುಂಬಾ ಮೇಲ್ದಂಡೆ ಯೋಜನೆ ವಲಯ, ಶಿವಮೊಗ್ಗ ಇವರಿಂದ ಗುತ್ತಿಗೆದಾರರು ಸಲ್ಲಿಸಿದ ಸಂಪೂರ್ಣ ಕಾಗದ ಪತ್ರಗಳನ್ನು ವಿವರವಾಗಿ ಪರಿಶೀಲಿಸಿ ನಂತರವೇ ಮೌಲ್ಯಮಾಪನ ಮಾಡಿ ಸರಿಯಿದೆಯೆಂದು ಕಂಡುಬಂದಿದ್ದರಿಂದ ಮೇಲ್ಕಂಡ ಗುತ್ತಿಗೆದಾರರ ತಾಂತ್ರಿಕ ಬಿಡ್‌ನ್ನು ಅನುಮೋದಿಸಲಾಗಿದೆ. ಈ ಬಗ್ಗೆ ಮೇಲಾಧಿಕಾರಿಗಳ ಆದೇಶದಂತೆ ದಿನಾಂಕ:

02/03/2012ರಂದು ಕರಾರು ಒಪ್ಪಂದ ಮಾಡಿಕೊಂಡು ಸದರಿ ಕಾಮಗಾರಿಯ ಕೆಲಸವನ್ನು ನಿರ್ವಹಿಸಿರುತ್ತಾರೆ. ಅದೇ ಪ್ರಕಾರ ತಾಂತ್ರಿಕ ಬಿಡ್‌ನ್ನು ತೆರೆಯುವಾಗ ಅವರು ಇ-ಟೆಂಡರಿನಲ್ಲಿ ನೀಡಿರುವ ಕಾಮಗಾರಿಯ ದೃಢೀಕರಣ ಪತ್ರವನ್ನು ಹಾರ್ಡ್ ಕಾಪಿ ತರಿಸಿ ಸಾಫ್ಟ್ ಕಾಪಿ ಲೋಡ್ ಮಾಡಿರುವುದನ್ನು ಪರಿಶೀಲಿಸಿ ಸಂಬಂಧಪಟ್ಟ ಗುತ್ತಿಗೆದಾರರು ಸಲ್ಲಿಸಿರುವ ದಾಖಲಾತಿಗಳ ಆಧಾರದ ಮೇಲೆ ಪರಿಶೀಲಿಸಿ ಮೌಲ್ಯಮಾಪನ ಮಾಡಿ ಸರಿಯಿದೆ ಎಂದು ಕಂಡುಬಂದಿದ್ದರಿಂದ ಬಿಡ್‌ನ್ನು ಅನುಮೋದಿಸಲಾಗಿದೆ."

19. It is not the specific case of the Disciplinary Authority that the DGO knowing fully well that the work done certificate produced by the contractor is fake, he has accepted and he has committed dereliction of duty. When the defence is clearly scrutinized, it shows that DGO was not aware that the document i.e., work done certificate is fake.

20. DGO got himself examined as DW-1. It is pertinent to extract relevant portion of evidence of DW-1 and it reads as "ಟೆಂಡರ್ ವಿಷಯದಲ್ಲಿ ಟೆಂಡರ್ ಪ್ರಕ್ರಿಯೆದಲ್ಲಿ ನಾನು ಟೆಂಡರ್ ಕರೆಯುವ ಅಧಿಕಾರ ಮಾತ್ರ ನನ್ನದಾಗಿ ಇರುತ್ತದೆ. ಮುಂದಿನ ಪ್ರಕ್ರಿಯೆ ಸಂಬಂಧಪಟ್ಟ ಮೇಲಾಧಿಕಾರಿಗಳಾದ ಅಧೀಕ್ಷಕ ಇಂಜಿನಿಯರ್ ಹಾಗೂ ಮುಖ್ಯ ಇಂಜಿನಿಯರ್ ರವರದ್ದು ಇರುತ್ತವೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮೇಲ್ಕಾಣಿಸಿದ ಕಾಮಗಾರಿಯ ಮುಂದಿನ ಪ್ರಕ್ರಿಯೆ ನಮ್ಮ ಮೇಲಾಧಿಕಾರಿಗಳು ನಿರ್ವಹಿಸಿದ್ದು, ಸಂಬಂಧಪಟ್ಟ ಮುಖ್ಯ ಇಂಜಿನಿಯರ್ ರವರು ಅನುಮೊದಿಸಿರುತ್ತಾರೆ. ಈ ಪ್ರಕ್ರಿಯೆಗಳನ್ನು ಅಂದರೆ ಕರಾರು ಪತ್ರ ಪಡೆಯುವಿಕೆ, ಪರಿಶೀಲಿಸುವಿಕೆ, ತಿರಸ್ಕರಿಸುವಿಕೆ ಅಧಿಕಾರ ಕೇವಲ ಮುಖ್ಯ ಇಂಜಿನಿಯರ್ ರವರದ್ದು ಇದ್ದು, ಇನ್ನಿತರ ವಿಷಯದಲ್ಲಿ ನಾನು ನನಗೆ ಲಿಖಿತ ರೂಪದಲ್ಲಿ ನನಗೆ ನಮ್ಮ ಮೇಲಾಧಿಕಾರಿಗಳು ಕಳುಹಿಸಿದ್ದ ಅವರ ಆದೇಶದ ಪ್ರಕಾರ ನಾನು ಮುಂದಿನ ಕೆಲಸ ನಿರ್ವಹಿಸಿರುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ."

21. When the evidence of DW-1 is closely scrutinized, it shows that he verified the work done certificate, which was uploaded online while submitting tender application with hard copy and accepted it. Further it is clear from the evidence of DW-1 that he has followed the instructions given by his superior officer i.e., Chief Engineer. DW-1 has been cross-examined by learned Presenting Officer, but nothing has been elicited. It has been suggested by the Presenting Officer to DW-1 that, the documents produced by the contractor Sri. Raju Chilakuri have not been verified. This suggestion is denied. Except this suggestion, nothing has been elicited. DW-1 has clearly stated that he verified all the documents which were uploaded online with hard copy and thereafter he accepted it. As stated above, it is not the case of the Disciplinary Authority that knowing fully

well that certificates are fake, the DGO has accepted them. The DGO has produced agreement dated: 02/03/2012 as per Ex.D-3, which was executed by contractor Sri. Raju Chilakuri. Further, the DGO has produced Form-PWG-33(C) as per Ex.D-4 and a letter addressed by Chief Engineer to the Managing Director, Karnataka Neeravari Nigama Limited, Bangalore dated: 27/06/2015 as Ex.D-6. None of the documents produced by the DGO are not disputed and there is no cross-examination of DW-1 on these documents. Complainant had given complaint to Chief Engineer stating that the work done certificate submitted by Sri. Raju Chilakuri is fake. Ex.D-6 shows that Sri. G.M. Jagadeesh, who is the complainant in this case had given complaint to Chief Engineer and on the basis of it, it has been recommended to Managing Director, Karnataka Neeravari Nigama Limited, Bangalore to black list the name of the contractor by name Sri. Raju Chilakuri. So, it is clear that after the complaint made by complainant herein, the Chief Engineer has taken steps to include the name of contractor Sri. Raju Chilakuri to the black list.

22. As stated above, the evidence adduced by the complainant and the DGO show that the DGO was not knowing that the work done certificate was fake. Had the DGO came to know that the work done certificate is fake, he would not have accepted it. It is pertinent to note that the complainant herein has given complaint on the say of one Sri. Chidananda and the documents supplied by him. After two years of acceptance of tender, this complaint has been made. Action is already taken by Chief Engineer to include the name of the contractor Sri. Raju Chilakuri to the black list. From the evidence and documents produced in this case only the conclusion that could be arrived that the DGO has accepted the document i.e., work done certificate not knowing that it is fake. Therefore, it can be said that there is no dereliction of duty on the part of DGO. There is no satisfactory and convincing evidence to come to the conclusion that the DGO has committed dereliction of duty. Viewing from any angle, the Disciplinary Authority has failed to prove the charges leveled against the DGO. Therefore, I am of the opinion that the charge framed against DGO is ***not proved.*** Hence, I proceed to record the following.

-: F I N D I N G :-

The Disciplinary Authority has ***not proved*** the charge leveled against the DGO.

Submitted to Hon'ble Upalokayukta for further action.

27/10

(C. RAJASEKHARA)
I/c Additional Registrar of Enquiries -15,
Karnataka Lokayukta,
Bengaluru.

ANNEXURE

List of witnesses examined on behalf of D.A.

PW-1	Sri. G.M. Jagadeesh (Complainant) Dated: 16/04/2021 (Original)

List of Documents marked on behalf of D.A.

Ex.P-1 Ex.P-1(a)	Copy of complaint dated: 22/04/2014 (Xerox) Signature of PW-1
Ex.P-2 Ex.P-2(a)	Copy of Form No.I dated: 04/04/2014 (Xerox) Signature of PW-1
Ex.P-3 Ex.P-(a)	Copy of Form No.II dated: 07/04/2014 (Xerox) Signature of PW-1
Ex.P-4 Ex.P-4(a)	Copy of rejoinder dated: 21/08/2014 (Xerox) Signature of PW-1
Ex.P-5	Copies of documents enclosed to the complaint by PW-1 (Xerox)

List of witnesses examined on behalf of DGO

DW-1	Sri. M.K. Bhaskar (DGO) Dated: 17/11/2022 (Original)

List of documents marked on behalf of DGO

Ex.D-1	Copy Delegation of Criminal powers in KNNL dated: 30/12/2004 (Xerox)
Ex.D-2	Copy of Tender approved by CE, KNNL, dated: 01/03/2012 (Xerox)
Ex.D-3	Copy of Agreement executed by Contractor dated: 02/03/2012 (Xerox)
Ex.D-4	Copy of Completion of work (Bill copy enclosed dated: 30/01/2013 (Xerox)
Ex.D-5	Copy of Extract condition of PWD Clause(262) for Black listing of Registered Contractor (Xerox)
Ex.D-6	Copy of letter addressed by Chief Engineer to M.D., KNNL, Bangalore for recommending the said Contractor in Black list dated: 27/06/2015 (Xerox)

22/10

(C. RAJASEKHARA)
I/c Additional Registrar of Enquiries -15,
Karnataka Lokayukta,
Bengaluru.

ಕರ್ನಾಟಕ ಸರ್ಕಾರ

ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿ.ಇ/152/2017/ಎ.ಆರ್.ಇ–15

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001.
ದಿನಾಂಕ: 31ನೇ ಅಕ್ಟೋಬರ್ 2023.

–:: ಶಿಫಾರಸ್ಸು ::–

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಎಂ ಕೆ. ಭಾಸ್ಕರ್, ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಜಸಂಇ 150 ಸೇಇವಿ 2016, ಬೆಂಗಳೂರು, ದಿನಾಂಕ:14/12/2016.

(2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್–2/ಡಿಇ/152/2017, ಬೆಂಗಳೂರು, ದಿನಾಂಕ: 31/01/2017.

(3) ಅಪರ ನಿಬಂಧಕರು ವಿಚಾರಣೆಗಳು–15 ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 27/10/2023.

*****

ಸರ್ಕಾರದ ಆದೇಶ ದಿನಾಂಕ: 14/12/2016 ರಂತೆ ಶ್ರೀ. ಎಂ. ಕೆ. ಭಾಸ್ಕರ್, ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು'ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್–2/ಡಿಇ/152/2017, ಬೆಂಗಳೂರು, ದಿನಾಂಕ: 31/01/2017ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು–4 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ. ತದನಂತರ, ಆದೇಶ ಸಂಖ್ಯೆ: ಉಪಲೋಕ್–1 & 2/ಡಿಇ/ವರ್ಗಾವಣೆ/2018, ದಿನಾಂಕ: 02/11/2018ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು–15, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಆ.ಸ.ನೌಕರರ ವಿರುದ್ಧ ನಡೆದಿದೆ ಎನ್ನಲಾದ ದುರ್ನಡತೆ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ ಮರುನಾಮಕರಣಗೊಳಿಸಿಗೆ

3. ಆ.ಸ.ನೌಕರರಾದ ಶ್ರೀ. ಎಂ. ಕೆ. ಭಾಸ್ಕರ್, ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

ANNEXURE No. 1
CHARGE

"ಆಪಾದಿತ ಸರ್ಕಾರಿ ನೌಕರರಾದ/ಶ್ರೀ ಎಂ.ಕೆ. ಭಾಸ್ಕರ್, ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು (ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ, ಶಿವಮೊಗ್ಗ ಜಿಲ್ಲೆ) ಆದ ನೀವು ಭದ್ರಾವತಿ ನಂ.4 ಬಿ.ಆರ್.ಎಲ್.ಬಿ.ಸಿ. ವಿಭಾಗದಲ್ಲಿ ಕಾರ್ಯಪಾಲಕ ಇಂಜಿನಿಯರ್‌ರಾಗಿ ಕೆಲಸ ಮಾಡುತ್ತಿದ್ದಾಗ ಹುಚ್ಚರಾಯನ ಕೆರೆಯ ಬಂದ್‌ನಿಂದ ಯಾತ್ರಿ ನಿವಾಸದವರೆಗೆ ಹುಚ್ಚರಾಯನ ಕೆರೆಯನ್ನು ಸೌಂದರ್ಯಗೊಳಿಸುವ ಸಲುವಾಗಿ ಸಂಯುಕ್ತ ಕಾಂಪೌಂಡ್ ಗೋಡೆಯನ್ನು ಕಟ್ಟುವ ಕಾಮಗಾರಿಯನ್ನು ಈ–ಟೆಂಡರ್ ಮೂಲಕ ಕರೆದಿದ್ದು, ಅವರಲ್ಲಿ 4 ಜನ ಗುತ್ತಿಗೆದಾರರು ಭಾಗವಹಿಸಿ 2 ಗುತ್ತಿಗೆದಾರರ ಟೆಂಡರ್ ತಿರಸ್ಕೃತವಾಗಿದ್ದು, ಉಳಿದ ಇಬ್ಬರು ಗುತ್ತಿಗೆದಾರರಾದ ಶ್ರೀ ರಾಜಕಿಶೋರ್ ರೆಡ್ಡಿ ಮತ್ತು ಶ್ರೀ ರಾಜು ಬೆಲಕುರಿ ಇವರ ತಾಂತ್ರಿಕ ಬಿಡ್ ಅಂಗೀಕಾರವಾಗಿದೆ. ಸದರಿ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್ ಅನ್ವಯ ಶ್ರೀ ರಾಜು ಬೆಲುಕರಿ, ಗುತ್ತಿಗೆದಾರರು ಕಡಿಮೆ ದರವನ್ನು ನಮೂದಿಸಿದ್ದರಿಂದ, ಅವರ ಆರ್ಥಿಕ ಬಿಡ್ ಅನುಮೋದನೆಗಾಗಿ ದಿನಾಂಕ:

02/03/2012ರಂದು ಕರಾರು ಒಪ್ಪಂದ ಮಾಡಿಕೊಂಡು ಸದರಿ ಕಾಮಗಾರಿಯ ಕೆಲಸವನ್ನು ನಿರ್ವಹಿಸಿದ್ದಾರೆ. ಆದರೆ, ನೀವು/ಆಪಾದಿತ ಸರ್ಕಾರಿ ನೌಕರರು ಈ ಕಾಮಗಾರಿಗಳನ್ನು ಟೆಂಡರ್ ಮೂಲಕ ನೀಡುವ ಸಂದರ್ಭದಲ್ಲಿ ಗುತ್ತಿಗೆದಾರರು ಸರಿಯಾದ ಗುತ್ತಿಗೆದಾರಿಕೆ ಪ್ರಮಾಣ ಪತ್ರವನ್ನು ಹೊಂದಿದ್ದಾರೆಯೇ ಅಥವಾ ಇಲ್ಲವೇ ಹಾಗೂ ಆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸರಿಯಾದ ರೀತಿ ಪರಿಶೀಲನೆ ಮಾಡಬೇಕಿತ್ತು. ಆದರೆ, ಈ ರೀತಿ ಶ್ರೀ ರಾಜು ಬಿಲುಕರಿರವರು ಪ್ರಥಮ ದರ್ಜೆ ಗುತ್ತಿಗೆದಾರರಾಗಿರುವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆಯದಿದ್ದರೂ ಸಹಾ ಕಾಮಗಾರಿ ನಿರ್ವಹಿಸಲು ಟೆಂಡರ್ ನೀಡಿ ಕರ್ತವ್ಯಲೋಪವೆಸಗಿರುತ್ತೀರಿ. ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದವರ್ತನೆ) ನಿಯಮಾವಳಿ 1966ರ 3(i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ಮುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ."

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–15), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ. ಎಂ. ಕೆ. ಭಾಸ್ಕರ್, ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಒಬ್ಬರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ–1 ರವರನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ ನಿಶಾನೆ ಪಿ–5 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರು ತಾವೆ ಸ್ವತ: ಡಿಡಬ್ಲ್ಯೂ–1 ಎಂದು ವಿಚಾರಣೆಗೆ

ಒಳಪಡಿಸಿಕೊಂಡಿದ್ದು, ನಿಶಾನೆ ಡಿ–1 ರಿಂದ ನಿಶಾನೆ ಡಿ–6ರ ವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ ಆ.ಸ.ನೌಕರರಾದ ಶ್ರೀ. ಎಂ. ಕೆ. ಭಾಸ್ಕರ್, ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ **'ದೋಷಮುಕ್ತಗೊಳಿಸಲು'** ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

31/12/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ–1,
ಕರ್ನಾಟಕ ರಾಜ್ಯ.